

ಶಿರಸಿಯ ಲಯನ್ಸ್ ಸಭಾಭವನದಲ್ಲಿ ನಡೆದ ಎರಡನೇ ದಿನದ ಕೆರೆ ಸಮ್ಮೇಳನದ ಗೋಷ್ಠಿಯಲ್ಲಿ ವಿದ್ಯಾರ್ಥಿಗಳು ದೀಪ ಬೆಳಗಿದರು. ಸುಭಾಷಚಂದ್ರನ್, ಪ್ರಸನ್ನಕುಮಾರ, ಅನಂತ ಅಶೀಸರ, ಸುರೇಶ ಹೆಬ್ಳೀಕರ, ಡಾ.ಟಿ.ವಿ. ರಾಮಚಂದ್ರ ಚಿತ್ರದಲ್ಲಿದ್ದಾರೆ

# ಕೆರೆ ಸಮ್ಮೇಳನದ ಸಮಾರೋಪ ಇಂದು

ಶಿರಸಿ:ಪಶ್ಚಿಮಘಟ್ಟದ ಕೆರೆಗಳು ಮತ್ತು ಜಲಮೂಲಗಳ ಸಂರಕ್ಷಣೆ– ನಿರ್ವಹಣೆ ಕುರಿತು ನಡೆಯುತ್ತಿರುವ ಮೂರು ದಿನಗಳ ಕೆರೆ ಸಮ್ಮೇಳನದ ಸಮಾರೋಪ ಇದೇ 15ರ ಸಂಜೆ 4 ಗಂಟೆಗೆ ತಾಲ್ಲೂಕಿನ ಸ್ವರ್ಣವಲ್ಲಿ ಮಠದಲ್ಲಿ ನಡೆಯಲಿದೆ.

ಬೆಳಿಗ್ಗೆ 9.30 ಗಂಟೆಗೆ ಡಾ. ರಮೇಶ ಹೆಗಡೆ ಗೋಷ್ಠಿಗಳನ್ನು ಉದ್ಘಾಟಿಸುವರು. ಶಿಕ್ಷಕರು, ವಿದ್ಯಾರ್ಥಿಗಳು ಕೆರೆ ಅಧ್ಯಯನದ ವರದಿ ಮಂಡಿಸುವರು. 2.30 ಗಂಟೆಗೆ ನಡೆಯುವ ಮುಕ್ತ ಸಂವಾದ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಕೇಶವ ಕೊರ್ಸೆ, ಸುಭಾಷಚಂದ್ರನ್, ಪ್ರಕಾಶ ಮೇಸ್ತ, ಶ್ರೀಧರ ಭಟ್ಟ, ಪ್ರೊ. ಬಿ.ಎಂ. ಕುಮಾರಸ್ವಾಮಿ ವಿಚಾರ ಮಂಡಿಸುವರು. ಪರಿಸರ ತಜ್ಞ ವೈ.ಬಿ. ರಾಮಕೃಷ್ಣ ಅಧ್ಯಕ್ಷತೆ ವಹಿಸುವರು.

ಸಮಾರೋಪ ಕಾರ್ಯಕ್ರಮದಲ್ಲಿ ಪೇಜಾವರ ಮಠದ ಶ್ರೀಗಳು, ಸ್ವರ್ಣವಲ್ಲಿ ಮಠದ ಶ್ರೀಗಳು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನ ಆಚಾರ್ಯ ಭಾಗವಹಿಸುವರು. ಸ್ವಾಮಿ ವಿಷ್ಣುಮಯಾನಂದ ಅವರಿಗೆ ಈ ಸಂದರ್ಭದಲ್ಲಿ ವೃಕ್ಷಲಕ್ಷ್ಮ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ಪ್ರಧಾನ ಸಿಸಿಎಫ್ ವಿನಯ ಲೂತ್ರಾ, ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್, ಜಿ.ಪಂ. ಸಿಇಒ ರಾಮಪ್ರಸಾತ್ ಮನೋಹರ ಪಾಲ್ಗೊಳ್ಳುವರು.